(*d*) Yes. After detailed examination of the case, it is found that the orders of the Divisional Commissioner are in order and no action is called for.

(*e*) No.

(*f*) Does not arise in view of reply to clause (*d*)

ಶ್ರೀ ಬಿ. ಭಾಸ್ಕರ ಶೆಟ್ಟಿ:—ಸ್ವಾಮಿ ಮಂಗಳೂರಿನ ಹಂಪನ ಕಟ್ಟೆಯ ಪುರಸಭಾ ಬಸ್ಸು ನಿಲ್ದಾಣದಲ್ಲಿ ಪುರಸಭೆಗೆ ಸೇರಿದ ವಸತಿ ಕೋಣೆಗಳನ್ನು ೫ ವರ್ಷದ ಲೀಜ್ ಕಾನೂನು ಪ್ರಕಾರ ಕೊಟ್ಟಿದ್ದೀವೆ ಎಂದು ಹೇಳುತ್ತಿದ್ದೀರಿ. ಇದಕ್ಕೆ ಸಂಬಂಧಪಟ್ಟವರು ಕಾಂಗ್ರೆಸ್ ಸದಸ್ಯರಾಗಿರುವುದರಿಂದ ಕಾನೂನನ್ನು ಉಲ್ಲಂಘನೆ ಮಾಡಿ ಸರ್ಕಾರದವರು ನೋಟಿಫಿಕೇಷನ್ ಮಾಡಿ ಲೀಜಿಗೆ ಕೊಟ್ಟಿದ್ದಾರೆ ಅಲ್ಲವೆ?

†ಶ್ರೀ ಬಿ. ಎಂ. ಪಾಟೀಲ್ :—ಅದು ಸರಿಯಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ:— ಇದರಲ್ಲಿ ಮುನ್ಸಿಪಲ್ ಕೌನ್ಸಿಲ್ ಇರುವಾಗ ಅವರನ್ನು ಕೇಳದೆ ಅವರು ನಿಮ್ಮ ಕಾಂಗ್ರೆಸ್‌ನವರು ಎಂದು ಹೇಳಿ ಲಂಚ ಪಡೆದು ಆ ಕಟ್ಟಡವನ್ನು ಲೀಜಿಗೆ ಕೊಟ್ಟಿದ್ದಾರೆ. ಇದನ್ನು ಇದನ್ನು ತಾವು ಒಪ್ಪುತ್ತೀರಾ.

ಶ್ರೀ ಬಿ. ಎಂ. ಪಾಟೀಲ್:—ಮಾನ್ಯ ಸದಸ್ಯರ ಅಭಿಪ್ರಾಯ ಸರಿಯಲ್ಲ. ಆ ಮುನ್ಸಿಪಲ್ ಕೌನ್ಸಿಲ್ಲಿನ ಕಮಿಷನರು ಡಿವಿಜನಲ್ ಕಮಿಷನರಿಗೆ ರೆಕಮೆಂಡ್ ಮಾಡಿದರು. ಅವರು ಅದನ್ನು ಒಪ್ಪಿಕೊಂಡು ಅವರಿಗೆ ಕೊಟ್ಟಿದ್ದಾರೆ.

SRI AZEEZ SAIT: - Without taking the Sanction of the Municipal Council, the Commissioner himself recommended to the Divisional Commissioner. Then, why should we have the Municipal Council.

SRI B. M. PATIL:—When the Municipal Council is functioning, the matter will go before it and when it is not functioning he is the appropriat authority of the Council who has to recommend the case to the higherauthority.

SRI N. G. HALAPPA:—Is it in consonance with the provisions of the Act.

SRI B. M. PATIL:—Yes.

NEW MUNICIPAL OFFICE BUILDING AT CHICKNAYAKANAHALLI TOWN

381. SRI C. K. RAJAIAH SHETTY (Chicknayakanahalli):— Will the Minister of State for Municipal Administration be pleased to state:—

(*a*) the cost of new Municipal Office building proposed to be constructed in Chicknaikanahalli Town;

(*b*) when technical and administrative sanction were accorded to these buildings;

(Sri C. K. RAJAIAH SHETTY)

(*c*) the expenditure so far incurred on these buildings;

(*d*) the closing balance expenditure of the said institution as on the last dates of September, October and November 1969?

SRI B. M. PATIL minister of state For municipal Administrion:—

(*a*) Rs. 60,000.

(*b*) The estimate for Rs. 60,000 has been scrutinised by the superintending Engineer, Bangalore Circle, on 25th September 1969 and Administrative sanction has yet to be accorded.

(*c*) Rs. 5,133-75.

(*d*) Closing balance on the last day of:—

			Rs.
(i)	September 1969	...	1,256-77
(ii)	October 1969	...	9,170-23
(iii)	November 1969	...	1,532-89

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ:— ಸ್ವಾಮಿ ಚಿಕ್ಕನಾಯಕನಹಳ್ಳಿ ಟೌನಿನಲ್ಲಿನ ಹೊಸಪುರ ಸಭಾ ಕಟ್ಟಡಕ್ಕೆ ಸಂಬಂಧಪಟ್ಟ ಹಾಗೆ ಆಗತಕ್ಕ ವೆಚ್ಚ ೬೨ ಸಾವಿರ ರೂಪಾಯಿಗಳು ಎಂದು ಕೊಟ್ಟಿದ್ದೀರಿ, ಮತ್ತು ಅವರು ಈಗಾಗಲೇ ೫೫ ಸಾವಿರ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಡ್ಮಿನಿಸ್ಟ್ರೇಟೀವ್ ಮಂಜೂರಾತಿ ಇಲ್ಲದೆ, ಅನ್ಯಾಯವಾಗಿ ಅವರು ಹಣವನ್ನು ಖರ್ಚು ಮಾಡುವುದು ನ್ಯಾಯವೇ ಮತ್ತು ಇದಕ್ಕೆ ಡೆಪ್ಯುಟಿ ಕಮಿಷನರ್ ಸ್ಪೇ ಆರ್ಡರ್ ಕೊಟ್ಟಿಲ್ಲವೆ, ಈ ದೃಷ್ಟಿಯಿಂದ ಅವರಿಗೆ ಜವಾಬ್ದಾರಿಯನ್ನು ಫಿಕ್ಸ್ ಮಾಡಿ ಸಂಬಂಧಪಟ ವರಿಂದ ಹಣವನ್ನು ವಾಪಸು ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ?

†ಶ್ರೀ ಬಿ. ಎಂ. ಪಾಟೀಲ್:—ಅವರಿಗೆ ಅದಕ್ಕೆ ಇನ್ನೂ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಸಿಕ್ಕಿಲ್ಲ. ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಟ್ಟ ಮೇಲೆ ಅವರು ಆ ಕೆಲಸವನ್ನು ಕಾರ್ಯಗತ ಮಾಡುತ್ತಾರೆ. ಆಗ ಎಲ್ಲಾ ಸಮಸ್ಯೆಗಳೂ ಪೂರ್ತಿಯಾಗಿ ಪರಿಹಾರವಾಗುತ್ತವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ : ಈಗ ೫೫ ಸಾವಿರ ಚಿಲ್ಲರೆ ಖರ್ಚಾಗಿದೆ ಅದಕ್ಕೆ ಸ್ಯಾಂಕ್ಷನ್ ಏನೂ ಇಲ್ಲ ಇದಕ್ಕೆ ರೆಸ್ಪೊನ್ಸಿಬಿಲಿಟಿ ಫಿಕ್ಸ್ ಮಾಡಿ, ಏಕೆ ಅವರ ಮೇಲೆ ಕ್ರಮತೆಗೆದುಕೊಳ್ಳಬಾರದು.

ಶ್ರೀ ಬಿ. ಎಂ. ಪಾಟೀಲ್ ;—ಈ ೫೫ ಸಾವಿರ ಚಿಲ್ಲರೆ ಏನು ಖರ್ಚು ಮಾಡಿದ್ದಾರೆ, ಅದನ್ನು ಹಳೆಯ ಕಟ್ಟಿಡಗಳಿಗೆ ಮತ್ತು ಇತರ ಕಾರ್ಯಗಳಿಗೆ ಖರ್ಚು ಮಾಡಿದ್ದಾರೆ. ಅದನ್ನು ನಿಯಮ ಬಾಹಿರವಾಗಿ ಖರ್ಚು ಮಾಡಿದ್ದರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ : ಈ ಬಿಲ್ಡಿಂಗ್ಸ್ ನೆಲಸಮ ಮಾಡಿ ಹೊಸದಾಗಿ ಕಟ್ಟುತ್ತೀರಾ ಮತ್ತು ಅದರ ರಿಪೇರಿ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಬಿ. ಎಂ. ಪಾಟೀಲ್ : ಅದಕ್ಕೆ ಸಂಬಂಧಪಟ್ಟದ್ದನ್ನು ಡೆಪ್ಯೂಟಿ ಕಮಿಷನರಿಗೆ ಬರೆದು ವಿವರ ತೆಗೆದುಕೊಂಡು, ಪುರ ಸಭೆಯವರು ಕಾನೂನು ಬಾಹಿರವಾಗಿ ನಡೆದಿದ್ದಾರೆಂದು ಸಿದ್ಧವಾದರೆ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತೇನೆ.

ಶ್ರೀ ಎಂ. ರಾಮಣ್ಣ :—ಮುನಿಸಿಪಾಲಿಟಿಯವರು ಸಾಂಕ್ಷನ್ ಆಂಟಿಸಿಪೇಟ್ ಮಾಡಿಕೊಂಡು ಕೆಲಸ ಮಾಡುವುದು ಸಾಮಾನ್ಯವಾದ ಪದ್ಧತಿಯಲ್ಲವೆ?

ಶ್ರೀ ಬಿ. ಎಂ. ಪಾಟೀಲ್ :—ಅಂಥದ್ದು ಸರ್ಕಾರದ ಗಮನಕ್ಕೆ ಯಾವುದು ಬಂದಿಲ್ಲ.

ಶ್ರೀ ಎಚ್ ಹುಚ್ಚು ಮಾಸ್ತಿಗೌಡ :—ಹೊಸ ಕಟ್ಟಡಕ್ಕೆ ಮಂಜೂರಾತಿ ತಯಾರಿಸಿ ಹಳೆಯ ಕಟ್ಟಡ ರಿಪೇರಿಗೋಸ್ಕರ ೫ ಸಾವಿರ ಬಿಲ್ಲರೆ ಖರ್ಚು ಮಾಡಿದ್ದಾರೆಂದು ಹೇಳಿದ್ದೀರಿ. ಇದು ಅನ್ಯಾಯವಾದುದು ಮತ್ತು ಅಕ್ರಮವಾದುದು. ಈ ರೀತಿ ಮಾಡಿರುವುದಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ ಎಂ ಪಾಟೀಲ್ : ನಾನು ಈಗಾಗಲೇ ಹೇಳಿದ್ದೇನೆ. ಹೊಸ ಕಟ ಡಕ್ಕೆ ಅಡ್ಮಿನಿಸ್ಟ್ರೇಟಿವ್ ಸಾಂಕ್ಷನ್ ಕೊಟ್ಟಿಲ್ಲ. ಆದ್ದರಿಂದ ಹೊಸ ಕಟ್ಟಡಕ್ಕೆ ಖರ್ಚು ಮಾಡುವ ಪ್ರಮೇಯ ಬರುವುದಿಲ್ಲ. ಹಳೆಯ ಕಟ್ಟಡಕ್ಕೆ ರಿಪೇರಿ ಸಲುವಾಗಿ ಅವರ ಪರಿಮಿತಿಯಲ್ಲಿ ಖರ್ಚು ಮಾಡಿರಬಹುದು.

CONFIRMATION OF LAND TO DWELLERS OF K.R. SAGAR RIGHT BANK AREAS.

386 SRI B. DODDABORE GOWDA (Srirangapatna) —
Will the Minister for Development be pleased to state :—

(*a*) the reason for not confirming the lands situated on the right Bank of K. R. Sagar, to about 300-400 persons who are dwelling there since about fifty years.

(*b*) the difficulties in not confirming the said area so far ;

(*c*) the reason for not including the people of the said area to any panchayat ;

(*d*) whether there is any proposal/ideal to make the said area as a panchayat ;

(*e* whether many representations have not been received for confirming the said places to the respective persons dwelling there ; if so the steps taken in this behalf ;

(*f*) the steps taken by the Government in respect of the permission that is being given by the neibghbouring panchayat to others for constructinn houses in the said area will not the people living in the said area be put to trouble on account of this?

SRI B. L. GOWDA (Deputy Minister for Co-operation):

(*a*) and (*b*) It was not possible to confirm the said area as it was not known to whose control the said area belonged.

(*c*) The said area has been included to Hulikere Panchayat since 1968.

(*d*) No.